ಸಂಕೇತ ಸಂಖ್ಯೆ : **33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K Subject : Second Language — KANNADA**

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater )**

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. 'ಹೃಷಿಕೇಶವನ್ನು' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ

   (ಎ) ಪ್ರಥಮಾ (ಬಿ) ದ್ವಿತೀಯಾ

   (ಸಿ) ತೃತೀಯಾ (ಡಿ) ಚತುರ್ಥಿ

2. 'ಸಂಸ್ಕೃತ' ಪದದ ತದ್ಭವ ರೂಪ

   (ಎ) ಸಕ್ಕದ (ಬಿ) ಸಂಕೃತ

   (ಸಿ) ಸಂಪ್ರತ (ಡಿ) ಸಮಕೃತ

3. 'ಅನುಭವ' ಈ ಪದದ ವಿರುದ್ಧಾರ್ಥಕ ರೂಪ

   (ಎ) ಅನುಭವ (ಬಿ) ಮಹಾನುಭಾವ

   (ಸಿ) ಅನನುಭವ (ಡಿ) ಸ್ವಾನುಭವ

4. 'ನಮ್ಮ ಶಾಲೆಯ ಆವರಣ ಸುಂದರವಾಗಿದೆ' ಈ ವಾಕ್ಯದಲ್ಲಿರುವ ಸರ್ವನಾಮ ಪದ

   (ಎ) ನಮ್ಮ (ಬಿ) ಶಾಲೆಯ

   (ಸಿ) ಆವರಣ (ಡಿ) ಸುಂದರವಾಗಿದೆ

5. 'ರಥೋತ್ಸವ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

   (ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ

6. 'ನಿರ್ಮಾಪಕ' ಪದದ ಬಹುವಚನ ರೂಪವಿದು

   (ಎ) ನಿರ್ಣಾಯಕ (ಬಿ) ನಿರ್ಮಾಪಕಗಳು

   (ಸಿ) ನಿರ್ದೇಶಕ (ಡಿ) ನಿರ್ಮಾಪಕರು

7. 'ಪತ್ನಿ' ಪದದ ಅನ್ಯಲಿಂಗರೂಪ

   (ಎ) ಮತಿ (ಬಿ) ಸತಿ

   (ಸಿ) ಪತಿ (ಡಿ) ಪಿತ

8. ಎಂತಹ ಅದ್ಭುತ ಕಲಾಕಾರನಪ್ಪ ಈ ಪ್ರಕೃತಿ! ಈ ವಾಕ್ಯದ ಕೊನೆಯಲ್ಲಿ ಬಳಕೆಯಾಗಿರುವ ಲೇಖಲ ಚಿಹ್ನೆ

(ಎ) ಪೂರ್ಣವಿರಾಮ (ಬಿ) ಉದ್ಧರಣ

(ಸಿ) ಪ್ರಶ್ನಾರ್ಥಕ (ಡಿ) ಆಶ್ಚರ್ಯ ಸೂಚಕ

9. 'ಹಣತೆ' ಈ ಪದದ ಸಮಾನಾರ್ಥಕ ರೂಪ

(ಎ) ದೀಪ (ಬಿ) ದೇವರು

(ಸಿ) ಆಕಾಶ (ಡಿ) ಭೂಮಿ

10. 'ಕೊಂಡ್ಹೋಗೊ' ಈ ಪದದ ಗ್ರಾಂಥಿಕ ರೂಪ

(ಎ) ಕೊಂಡು ಬಾ (ಬಿ) ತೆಗೆದುಕೊಂಡು ಹೋಗು

(ಸಿ) ಕೊಟ್ಟುಹೋಗು (ಡಿ) ಕೊಂಡಾಡು

11. 'ಮೂತ್ತೈದೆ' ಈ ಪದದ ಶುದ್ಧರೂಪ

(ಎ) ಮುತ್ತುಐದು (ಬಿ) ಮೂತ್ತೈದೆ

(ಸಿ) ಮುತ್ತೈದೆ (ಡಿ) ಮೂತೈದೆ

12. ಈ ಪದವು 'ಅನ್ಯದೇಶ್ಯ ಪದ'ಕ್ಕೆ ಉದಾಹರಣೆಯಾಗಿದೆ

(ಎ) ಮಳೆ (ಬಿ) ಕೆರೆ

(ಸಿ) ಬಾವಿ (ಡಿ) ಚೆಕ್ಕು

13. ಈ ಪದವು 'ಅನ್ವರ್ಥನಾಮ'ಕ್ಕೆ ಉದಾಹರಣೆಯಾಗಿದೆ

(ಎ) ಬೆಟ್ಟ (ಬಿ) ಮೈಸೂರು

(ಸಿ) ಶಿಕ್ಷಕ (ಡಿ) ಗದ್ದೆ

14. 'ನಾವು ದೇಶ ಸೇವೆಯನ್ನು ಮಾಡಬೇಕು' ಈ ವಾಕ್ಯದಲ್ಲಿರುವ ಕ್ರಿಯಾಪದ

(ಎ) ನಾವು (ಬಿ) ದೇಶ

(ಸಿ) ಸೇವೆಯನ್ನು (ಡಿ) ಮಾಡಬೇಕು

15. 'ನೋಡು' ಈ ಪದದ ನಿಷೇಧಾರ್ಥಕ ರೂಪ

(ಎ) ನೋಡುವನು (ಬಿ) ನೋಡನು

(ಸಿ) ನೋಡಿಯಾನು (ಡಿ) ನೋಡಲಿ

16. ಈ ಕೆಳಗಿನ ***'ಅ' ಪಟ್ಟಿ***ಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು ***'ಬ' ಪಟ್ಟಿ***ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| ***'ಅ' ಪಟ್ಟಿ*** | | ***'ಬ' ಪಟ್ಟಿ*** | |
|---|---|---|---|
| i) | ದ್ವಿರುಕ್ತಿ | ಅ) | ಮೂರು ಸಾಲುಗಳು |
| ii) | ಉಪಮಾಲಂಕಾರ | ಆ) | ಆರು ಸಾಲುಗಳು |
| iii) | ಅನುಕರಣ | ಇ) | ಮನೆ–ಮಠ |
| iv) | ಜೋಡುನುಡಿ | ಈ) | ನಗುವಿನ ಪರದೆ |
| v) | ತ್ರಿಪದಿ | ಉ) | ಅಚ್ಚುಮುರಿದ ಹಾಳು ಬಂಡಿಯಂತೆ |
| | | ಊ) | ಕ್ಷಣಕ್ಷಣ |
| | | ಋ) | ಥಳಥಳ |

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

17. 'ದಪ್ಪ' ಅನ್ನೋದಕ್ಕೆ ಧಾರವಾಡದ ಕಡೆ ........................ ಎಂದು ಕರೆಯುತ್ತಾರೆ.

18. ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ಬಿ.ವಿ. ಕಾರಂತರ ನಾಟಕದ ಹೆಸರು ........ .

19. ಬೆಂಗಳೂರು ನಗರ ನಿರ್ಮಾಪಕ ..................... .

20. ಗಾಂಧಿಯವರು ಇಳೆಗೆ ..................... ತತ್ತ್ವವನ್ನು ಬೋಧಿಸಿದರು.

21. ಹಡಗವು ..................... ಭಾಷೆಗಳ ನವಖಂಡವಾಗಿದೆ.

ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $8 \times 1 = 8$

22. ಹಿಟ್ಟಿನ ಮುದ್ದೆಯನ್ನು ಚಪಾತಿ ಆಕಾರಕ್ಕೆ ತರುವ ಕ್ರಿಯೆಗೆ ಏನೆನ್ನುತ್ತಾರೆ ?

23. ಬಿ.ವಿ. ಕಾರಂತರು ಯಾರ ಬಳಿಯಲ್ಲಿ ಶಿಷ್ಯವೃತ್ತಿ ಗಿಟ್ಟಿಸಿದರು ?

24. 'ಮಗುವಿನ ಕರೆ' ಪಾಠದಲ್ಲಿ ಶಾಸ್ತ್ರಿಗಳ ಸೊಸೆ ಮಧ್ಯಾಹ್ನ ಎಲ್ಲಿಗೆ ಹೊರಟಳು ?

25. ಗೋಪುರಗಳು ಯಾವುದರ ಸಂಕೇತವಾಗಿವೆ ?

26. ಭಾಗ್ಯದ ಬಳೆಗಾರ ಪದ್ಯದಲ್ಲಿ ಹಡೆದವ್ವನ ಆಸೆ ಏನು ?

27. ಯುಗಾದಿ ಬಂದರು, ಹೋದರು ಯಾರ ಬಸಿರು ತುಂಬಲಿಲ್ಲ ?

28. 'ದರ್ಶನ' ಪದ್ಯದಲ್ಲಿ ತಿಳಿಸಿರುವಂತೆ ಸರತಿ ಸಾಲಿನಲ್ಲಿ ನಿಂತಿದ್ದಾಗ ಕವಿಗಳನ್ನೇ ನೋಡುತ್ತಿದ್ದವರು ಯಾರು ?

29. ಭರತನ ಆಸ್ಥಾನವು ಯಾವುದರಿಂದ ನಿರ್ಮಿತವಾಗಿದೆ ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಚಿನ್ನದ ಕೋಲಿನ ಮಹಿಮೆ ಏನೆಂಬುದನ್ನು 'ಆದೇಶವೇ ಅವರ ತಾಯಿ' ಪಾಠದಲ್ಲಿ ಹೇಗೆ ತಿಳಿಸಲಾಗಿದೆ ?

31. 'ಲಠ್ಠಣಿಗೆ ಪುರಾಣ' ಪಾಠದಲ್ಲಿ ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

32. ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆಗಳು ಯಾವುವು ?

33. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನಾಗಿತ್ತು ?

34. ತಗಡೂರು ರಾಮಚಂದ್ರರಾಯರನ್ನು 'ಛೋಟಾ ಗಾಂಧಿ' ಎಂದು ಏಕೆ ಕರೆಯುತ್ತಿದ್ದರು ?

35. ಪ್ರಾಚೀನ ಕವಿಗಳನ್ನು 'ಜೀವನದಿ' ಪದ್ಯದಲ್ಲಿ ಯಾವ ಹೋಲಿಕೆಯೊಂದಿಗೆ ಪರಿಚಯಿಸಲಾಗಿದೆ ?

36. ತಗಡೂರು ರಾಮಚಂದ್ರರಾಯರು ಮಾಡಿದ ಎರಡು ಕಾರ್ಯಗಳು ಯಾವುವು ?

37. ಬಳೆಗಾರನಿಗೆ ಹಡೆದವ್ವನ ಗುರುತನ್ನು ಬಾಲೆ ಹೇಳಿದುದು ಹೇಗೆ ?

38. ಎಂಥ ಯುಗಾದಿ ಬರಲೆಂದು ಕವಿ ಆಶಿಸುತ್ತಾರೆ ?

39. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿದೆ ಎಂಬುದನ್ನು ಬರೆಯಿರಿ.

40. 'ದರ್ಶನ' ಪದ್ಯದಲ್ಲಿ ತಿಳಿಸಿರುವಂತೆ ಕವಿಪುತ್ರನು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದ್ದು ಏಕೆ ?

41. ಭರತೇಶನು ಇತರರಿಗಿಂತ ಹೇಗೆ ಭಿನ್ನವಾಗಿದ್ದ ಎಂಬುದನ್ನು ಕವಿ ವರ್ಣಿಸಿದ್ದಾನೆ ?

42. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 2 = 2

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝುರಿ.

***ಅಥವಾ***

ಸುಳಿಮಿಂಚಿನ ಸೆಳೆಮುಂಗಾರಿನ ಮಳೆ

ಕವಿವರ ರತ್ನಾಕರನ ಕೆರೆ.

ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಸ್ಥಳ ಮತ್ತು ಕಾಲವನ್ನು ಬರೆಯಿರಿ : 2 × 2 = 4

43. ಲಕ್ಷ್ಮಣರಾಯ

44. ಪ್ರೊ. ಈರಣ್ಣ ಇಟಗಿ

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : 4 × 3 = 12

45. "ತಾಳಲಾರೆ ವಿಧಿಯ ಶಾಪ! ತಾಳಲಾರೆನೈ!"

46. "ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ"

47. "ಶಠತೆಯನು ಸತ್ಯದಲಿ ಜಯಿಸಿದ ಕಲಿ"

48. "ನೆರವೇ ಗೆಲುವು, ಔಚಿತ್ಯವೇ ಚೆಲುವು"

49. & 50 ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಕೇದಾರ ಪರ್ವತವನ್ನು ಏರುವ ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿ ವಿಶ್ವ' ಎಂದು ಏಕೆ ಕರೆಯುತ್ತಾರೆ ? ವಿವರಿಸಿ.

— 'ಮಳೆಕೊಯ್ಲು' ಪಾಠದಲ್ಲಿ ತಿಳಿಸಿರುವಂತೆ ಜಲಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯಲು ಕಾರಣವೇನು ?

— ತಗಡೂರು ರಾಮಚಂದ್ರರಾಯರನ್ನು 'ಸ್ವದೇಶಿ ವ್ರತದ ಜಂಗಮಮೂರ್ತಿ' ಎಂದು ಕರೆಯಲು ಕಾರಣವೇನು ?

51. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಒಂದು*** ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— 'ಮಾನವ ಜನ್ಮ ದೊಡ್ಡದು' ಎಂಬುದನ್ನು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ತಿಳಿಸಿರುವ ರೀತಿಯನ್ನು ವಿವರಿಸಿ.

— 'ಭಾಗ್ಯದ ಬಳೆಗಾರ' ಪದ್ಯದ ಸಾರಾಂಶವನ್ನು ಬರೆಯಿರಿ.

52. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : 1 × 3 = 3

— ಹಾಸಿಗೆ ಇದ್ದಷ್ಟು ಕಾಲುಚಾಚು

— ಮಾಡಿದ್ದುಣ್ಣೊ ಮಹಾರಾಯ

— ಬೆಳೆಯುವ ಸಿರಿ ಮೊಳಕೆಯಲ್ಲಿ

53. ಮೈಸೂರಿನ ಅಶೋಕ ರಸ್ತೆಯ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ಸಿದ್ದೇಶ್ / ರತ್ನ ಎಂದು ಭಾವಿಸಿ, ನಿಮ್ಮ ಮುಂದಿನ ವ್ಯಾಸಂಗಕ್ಕಾಗಿ ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ. 1 × 5 = 5

***ಅಥವಾ***

ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿರುವ ಜೆ.ಎಸ್.ಎಸ್. ಪ್ರೌಢಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ನಿಜಗುಣ / ಇಂಪನ ಎಂದು ಭಾವಿಸಿ, ಶೈಕ್ಷಣಿಕ ಪ್ರಗತಿಯ ಬಗ್ಗೆ ಹೆಚ್.ಡಿ. ಕೋಟೆಯ, ಸರಗೂರಿನಲ್ಲಿ ವಾಸವಾಗಿರುವ ನಿಮ್ಮ ತಂದೆ ಸಂಗಮೇಶ್ ಅವರಿಗೆ ಒಂದು ಪತ್ರ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದನ್ನು*** ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಪರಿಸರ ಸಂರಕ್ಷಣೆ

— ಸ್ವಚ್ಛತಾ ಆಂದೋಲನ

— ವಿದ್ಯಾರ್ಥಿ ಜೀವನದಲ್ಲಿ ಶಿಸ್ತು